(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ಈಗಾಗಲೇ ಕೆಲಸಮಾಡುತ್ತಿವೆ. ಅದರಲ್ಲಿ 4 ರಿಗ್ಸ್ ಹೇಲಾಗಿವೆ. ಅದಕ್ಕಾಗಿ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ಅದಕ್ಕೆ ಸಂಬಂಧಪಟ್ಟ ಸ್ಪೇರ್ ಪಾರ್ಟ್ಸ್‌ನ್ನು ತರಿಸುವುದಕ್ಕೆ ಎಲ್ಲಾ ಏರ್ಪಾಡು ಮಾಡಿದ್ದೇವೆ.

ಶ್ರೀ ವಿ. ಎನ್. ಪಾಟೀಲ್ : ಯಾವ್ಯಾವ ಗ್ರಾಮಗಳಲ್ಲಿ ನೀರಿನ ಅಭಾವ ಏದೆ, ನೀರು ಸರಿಯಾಗಿ ಸಿಗುತ್ತಾ ಇಲ್ಲ ಅಲ್ಲಿ ಎತ್ತಿನ ಗಾಡಿಗಳ ಹಾಗೂ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಿದರೆ ಮಾತ್ರ ವ್ಯವಸಾಯ ನಡೆಯುತ್ತದೆ. ಜನಗಳಿಗೆ ಎಷ್ಟು ನೀರು ಮುಟ್ಟಬೇಕೋ ಅಷ್ಟು ಇನ್ನೂ ಮುಟ್ಟಿಲ್ಲವೆಂಬುದನ್ನು ನಾನು ಎರಡು ಮೂರು ಸಾರಿ ಕೇಳಿದ್ದೇನೆ. ಆದ್ದರಿಂದ ಡಿ-ಮಾರ್ಕ್ ಮಾಡಿದ ಗ್ರಾಮಗಳಲ್ಲಿ ಇನಿಷಿಯೇಟಿವ್ ತೆಗೆದುಕೊಂಡು ಬಾವಿಗಳನ್ನು ತೋಡಿಸಬೇಕು ಆ ಮೂಲಕ ಪ್ರತಿಯೊಂದು ಗ್ರಾಮಕ್ಕೂ ನೀರು ಕೊಡುವ ಹಾಗೆ ಅಷ್ಯೂರೆನ್ಸ್ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ಮಾನ್ಯ ಸದಸ್ಯರು ಹೇಳಿದ ಪ್ರತಿಯೊಂದು ವಿಷಯವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಟ್ಯಾಂಕರ್‌ಗಳ ಹಾಗೂ ಎತ್ತಿನ ಗಾಡಿಗಳ ಮೂಲಕ ಜನಗಳಿಗೆ ನೀರು ಪೂರೈಕೆಯನ್ನು ಮಾಡುತ್ತೇವೆ

CONSTRUCTION OF BRIDGE IN ANKOLA TALUK

928. Smt. RADHA BHATT.-- (Ankola)

Will the Minister for Public Works and Electricity be pleased to state :—

(*a*) whether it is under consideration of the Government to construct a bridge across Halavalli-Hasehalla in Ankola Taluk of N. K. District;

(*b*) if so, when the construction work of this bridge will be started ?

SRI H. M. CHANNABASAPPA (Minister for Public Works and Electricity) :—

(*a*) No

(*b*) Does not arise in view of reply to clause (*a*)

ಶ್ರೀಮತಿ ರಾಧಾ ಭಟ್.—ಈ ತಾಲ್ಲೂಕಿನಲ್ಲಿ ಸೇತುವೆ ತುಂಬಾ ಅವಶ್ಯಕತೆ ಇರುವುದರಿಂದ ಅದನ್ನು ಈಗ ನಿರ್ಮಾಣ ಮಾಡದಿದ್ದರೆ ಅಲ್ಲಿನ ಜನರಿಗೆ ಬಹಳ ತೊಂದರೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಅಲ್ಲಿ ರಸ್ತೆ ಇಲ್ಲ ಆದ್ದರಿಂದ ಸೇತುವೆ ಕಟ್ಟುವ ಪ್ರಶ್ನೆ ಬರುವುದಿಲ್ಲ. ಅಲ್ಲಿ ರಸ್ತೆಯಾದ ಮೇಲೆ ಸೇತುವೆ ಕಟ್ಟುವ ಪ್ರಶ್ನೆ ಬರುತ್ತದೆ.

ಶ್ರೀಮತಿ ರಾಧಾ ಭಟ್ —ಹಾಗಾದರೆ ಈ ಸೇತುವೆ ಕಟ್ಟುವ ಕಾರ್ಯದ ಬಗ್ಗೆ ಸಂಬಂಧ ಪಟ್ಟ ಇಂಜಿನಿಯರುಗಳಿಂದ ಸರ್ಕಾರಕ್ಕೆ ಏನಾದರೂ ವರದಿ ಬಂದಿದೆಯೇ ? ಅಥವಾ ಜನರಿಂದೇನಾದರೂ ಬೇಡಿಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ರೂರಲ್ ಕಮ್ಯೂನಿಕೇಷನ್. ಹಳ್ಳಿಯಿಂದ ಹಳ್ಳಿಗೆ ಹೋಗುವ ರಸ್ತೆ. ಈಗ ಅದನ್ನು ಮಾಸ್ಟರ್ ಪ್ಲಾನಿನಲ್ಲಿ ಸೇರಿಸಿದ್ದಾರೆ. ಆದ್ದರಿಂದ ರಸ್ತೆ ಆದ ಮೇಲೆ ಸೇತುವೆ ಕಟ್ಟುವ ವಿಷಯವನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಚ್. ಎಸ್ ಪಿದ್ದಪ್ಪ.—ಈಗ ಅಲ್ಲಿ ರಸ್ತೆ ಇಲ್ಲ, ರಸ್ತೆಯಾದಮೇಲೆ ಸೇತುವೆ ಕಟ್ಟುತ್ತೇವೆಂದು ಹೇಳಿದಿರಿ. ನಿಮ್ಮ ಇಲಾಖೆಯವರು ರಸ್ತೆಗಳನ್ನು ತೆಗೆದುಕೊಳ್ಳಬೇಕಾದರೆ ಜಾಸ್ತಿ ಹಣ ಬೇಕಾಗುತ್ತದೆ. ಮೊದಲು ಸೇತುವೆಗಳನ್ನು ಕಟ್ಟಿಕೊಂಡು ಆಮೇಲೆ ರಸ್ತೆಗಳನ್ನು ಮಾಡುತ್ತೇವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೇತುವೆಗಳು ನಾನಾ ತರಹ ಇರುತ್ತವೆ. 20 ಅಡಿ, 50 ಅಡಿ ಮತ್ತು 100 ಅಡಿಗಳಂತೆ ಇರುತ್ತವೆ. ರೂರಲ್ ಕಮ್ಯೂನಿಕೇಷನ್ಸ್ ಪ್ರೋಗ್ರಾಂನಲ್ಲಿ ಬೇಕಾದಷ್ಟು ಸೇತುವೆಗಳನ್ನು ಕಟ್ಟಬಹುದು ಆ ಕಮ್ಯೂನಿಕೇಷನ್ಸ್ ಪ್ರೋಗ್ರಾಂನಲ್ಲಿ ಇರತಕ್ಕ ಸಣ್ಣಪುಟ್ಟ ಸೇತುವೆಗಳನ್ನು ಮಾಡುವಾಗ ಇದನ್ನು ಕಟ್ಟಿಕೊಡುತ್ತಾರೆ.

ಶ್ರೀಮತಿ ರಾಧಾಭಟ್ :....ಹಾಗಾದರೆ ಅಲ್ಲಿಯ ಜನರ ಅಭ್ಯುದಯದ ದೃಷ್ಟಿಯಿಂದಲಾದರೂ ಈ ಸೇತುವೆಯನ್ನು ಕಟ್ಟುವುದು ಅವಶ್ಯಕವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ —ರಸ್ತೆಯಾದ ನಂತರ ಅದನ್ನು ತೆಗೆದುಕೊಳ್ಳುತ್ತೇವೆ. ಅಲ್ಲಿ ಇನ್ನೂ ರಸ್ತೆಯೇ ಆಗದಿರುವಾಗ ಅದಕ್ಕೆ ಅದಕ್ಕೆ ಅಂಥ ಆತುರತೆಯಿಲ್ಲ ಎಂಬುದು ನನ್ನ ಅಭಿಪ್ರಾಯ.